(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಇದು ಪ್ರಜಾತಂತ್ರ ವಿರೋಧಿಯಾದ ತಿದ್ದುಪಡಿ. ಇದನ್ನು ಒಪ್ಪಲಿಕ್ಕೆ ತಯಾರಿಲ್ಲ. ಇದನ್ನು ಏಕೆ ಮಾಡಬೇಕು? ಇವರು ನಮ್ಮ ಬಗ್ಗೆ ಬಹಳ ಮಾತನಾಡುತ್ತಾರೆ. ಮೊನ್ನೆಯ ಎ.ಐ.ಸಿ.ಸಿ. ಅಧಿವೇಶನದಲ್ಲಿ ಸಮ್ಮಿಶ್ರ ಸರ್ಕಾರ ರಚಿಸಲು ನಾವು ಸಿದ್ದ ಎಂಬ ನಿರ್ಣಯ ಮಾಡಿದ್ದಾರೆ.

ಅಧ್ಯಕ್ಷರು : ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಡಿ.ವಿ. ಸದಾನಂದಗೌಡ : ಇದನ್ನು ನಾವು ವಿರೋಧ ಮಾಡುತ್ತೇವೆ....

(ಗೊಂದಲ)

5.20 ಪಿ.ಎಂ.

ಶ್ರೀ ಡಿ.ವಿ. ಸದಾನಂದಗೌಡ : ಈ ಹಠಮಾರಿತನ ಏನೆಂದರೆ, ಯಾವುದಾದರೂ ತರಹ ಕಾನೂನು ಮಾಡಬೇಕು. ಎಪಿಎಂಸಿ ಯಲ್ಲಿ ಮೂರು ಮೂರು ಜನರಿಗೆ ನಾಮಿನೇಷನ್ ಮಾಡಿದ್ದಾರೆ. ಅವರಿಗೆ ಬಹುಮತ ಸಿಗುತ್ತಿಲ್ಲ. ಅದಕ್ಕಾಗಿ ಅದರಲ್ಲಿ ಬಹುಮತ ಮಾಡಬೇಕೆಂದು ಅವರ ನಿಲುವು. ಇಡೀ ಸಹಕಾರಿ ತತ್ವಕ್ಕೆ ಪೂರಕವಾದ ವಿಚಾರ ಈ ಕೆಲಸವನ್ನು ನೀವು ಮಾಡಬಾರದು. ನೀವು ಹಿರಿಯರಿದ್ದೀರಿ. ನಾವು ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಉತ್ತಮ ಇತಿಹಾಸ ಇರುವವರು. ನಿಮ್ಮ ಈ ಪ್ರಯತ್ನಕ್ಕೆ ನಾವು ವಿರೋಧ ವ್ಯಕ್ತಪಡಿಸುತ್ತಾ ನಾವು ಸಭಾತ್ಯಾಗ ಮಾಡುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ : ರಾಜಕೀಯ ಸ್ವಾರ್ಥಕ್ಕಾಗಿ ಈ ಬಿಲ್ ತರುತ್ತಿದ್ದಾರೆ.

(ಬಿ.ಜೆ.ಪಿ. ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಿರಿಯ ಮುಖಂಡರಿದ್ದೀರಿ, ಇಂತಹ ವಿಚಾರಗಳಿಗೆ ಏಕೆ ಪ್ರಿಸ್ಟೀಜ್ ಮಾಡಿಕೊಳ್ಳುತ್ತೀರಿ? ಒಂದು ಕಡೆ ಸಂಘ ಸಂಸ್ಥೆಗಳಿಗೆ, ಇನ್‌ಸ್ಟಿಟ್ಯೂಷನ್‌ಗಳಿಗೆ ನಾವು ಸ್ಟೆಬಿಲೈಸ್ ಮಾಡಬೇಕು, ಆ ಬಿಲ್, ಈ ಬಿಲ್ ತರಬೇಕೆಂದು, ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು, ವಿಕೇಂದ್ರೀಕರಣ ಮಾಡಬೇಕೆಂದು ಹೇಳುತ್ತೀರಿ. ಇನ್ನೊಂದು ಕಡೆ ಪ್ರಜಾ ಪ್ರಭುತ್ವದಲ್ಲಿ ಪೂರಕವಾದ ತಿದ್ದುಪಡಿಗಳನ್ನು ತೆಗೆದುಕೊಂಡು ಬರುತ್ತೀರಿ. ಇದನ್ನು ಮಾಡುವುದಕ್ಕೆ ಹೋಗಬೇಡಿ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾನು ಅಲಿಗೇಷನ್ ಮಾಡಬೇಕಾಗುತ್ತದೆ. ಇವರಿಗೆ ದುರುದ್ದೇಶ ಇದೆ. ಆವರ್ತ ನಿಧಿ ಮೇಲೆ ಕಣ್ಣು ಇದೆ ಎಂದು ನಾನು ಹೇಳಬೇಕಾಗುತ್ತದೆ. ಸೊಸೈಟಿಗಳಿಗೆ ಕಾಂಗ್ರೆಸ್ಸೀಕರಣ ಮಾಡಿದರು, ಅದೇ ತರಹ ಎ.ಪಿ.ಎಂ.ಸಿ.ಗೆ ಸಹಿತ ಕಾಂಗ್ರೆಸ್ ಗವರ್ನಮೆಂಟ್ ಬರಬೇಕೆಂದು ಮಾಡುತ್ತಿದ್ದಾರೆ. ನಿಮ್ಮ ಮನಸ್ಸು ಒಲಿಸುವುದು ಇಷ್ಟು ಕಷ್ಟ, ಇನ್ನು ಕಠೋರ ಹೃದಯದ ಕಾಂಗ್ರೆಸ್ಸಿಗರ ಮನಸ್ಸು ಒಲಿಸುವುದು ಅಷ್ಟು ಸುಲಭವಲ್ಲ. ಕೆಳ ಹಂತದಲ್ಲಿ ಅವರ ಉದ್ದೇಶಗಳು ಬಹಳ ಕೆಟ್ಟದಾಗಿವೆ. ಗೌರವಾನ್ವಿತ